Computer

# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | **: 303** |
| ಸದಸ್ಯರ ಹೆಸರು | :ಶ್ರೀಗೋವಿಂದರಾಜು (ವಿಧಾನಸಭೆಯಿಂದ ಚುನಾಯಿತರಾದವರು) |
| ಉತ್ತರಿಸುವ ದಿನಾಂಕ | **: 21.12.2022.** |
| ಉತ್ತರಿಸುವ ಸಚಿವರು | : ಕಂದಾಯ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಸರ್ಕಾರವು ಭೂ ಪರಿವರ್ತನೆಗೆ ರೂಪಿಸಿರುವ 'ಅಫಿಡವಿಟ್ ಬೇಸ್ಡ್ ಲ್ಯಾಂಡ್ ಕನ್ವರ್ಷನ್' ತಂತ್ರಾಂಶದಂತೆ ಭೂ ಪರಿವರ್ತನೆಗೆ ನಿಗದಿಪಡಿಸಲಾದ ಕಾಲಮಿತಿಯೇನು; | ಅರ್ಜಿದಾರರು ಭೂ ಪರಿವರ್ತನೆಗೆ https:/landrecords. karnatak:gov.in/citizenportalನಲ್ಲಿ ಲಾಗಿನ್ ಆಗುವ ಮೂಲಕ Affidavit Based Conversion module ನಲ್ಲಿ ಅರ್ಜಿ ಸಲ್ಲಿಸಿದ ದಿನಾಂಕದಿಂದ ಮುಂದಿನ 30 ದಿನಗಳೊಳಗಾಗಿ ಭೂ ಪರಿವರ್ತನಾ ಆದೇಶ/ಹಿಂಬರಹವನ್ನು ಜಿಲ್ಲಾಧಿಕಾರಿಗಳು ಹೊರಡಿಸತಕ್ಕದ್ದು. |
| ಆ) | ಕಳೆದ ಒಂದು ವರ್ಷದಲ್ಲಿ ತಂತ್ರಾಂಶದ ಮೂಲಕ ಭೂ-ಪರಿವರ್ತನೆಗೆ ಬೇಡಿಕೆಗಳನ್ನು ಸಲ್ಲಿಸಲಾದ ಪ್ರಕರಣಗಳೆಷ್ಟು; (ಜಿಲ್ಲಾವಾರು ವಿವರ ನೀಡುವುದು) | ವಿವರಗಳನ್ನು **ಅನುಬಂಧ-1**ರಲ್ಲಿರಿಸಿದೆ. |
| ಇ) | ನಿಗದಿಪಡಿಸಿದ ಕಾಲಮಿತಿಯೊಳಗೆ ಭೂ ಪರಿವರ್ತನೆ ಪ್ರಕ್ರಿಯೆಯನ್ನು ಪೂರ್ಣಗೊಳಿಸದಿರುವ ಪ್ರಕರಣಗಳೆಷ್ಟು; (ಜಿಲ್ಲಾವಾರು ವಿವರ ನೀಡುವುದು) | ವಿವರಗಳನ್ನು **ಅನುಬಂಧ-2**ರಲ್ಲಿರಿಸಿದೆ. |
| ಈ) | ನಿಗದಿತ ಕಾಲಮಿತಿಯೊಳಗೆ ಭೂ ಪರಿವರ್ತನೆ ಪ್ರಕ್ರಿಯೆಯನ್ನು ಪೂರ್ಣಗೊಳಿಸದಿರಲು ಕಾರಣಗಳೇನು; ಮತ್ತು ಈ ರೀತಿ ವಿಳಂಬದಿಂದ ಸದರಿ ತಂತ್ರಾಂಶದ ಸದುಪಯೋಗ ವಾಗಿದೆಯೇ ಎಂಬುದನ್ನು ಸರ್ಕಾರವು ಪರಿಶೀಲಿಸಿದೆಯೇ; ಹಾಗಿದ್ದಲ್ಲಿ, ವಿಳಂಬವಾಗದಂತೆ ಯಾವ ರೀತಿ ಕ್ರಮಗಳನ್ನು ಕೈಗೊಳ್ಳಲಾಗಿದೆ; ಇದು ಕಾರ್ಯಗತಗೊಂಡು ಎಷ್ಟು ಪ್ರಕರಣಗಳನ್ನು ನಿಗದಿತ ಕಾಲಮಿತಿಯೊಳಗೆ ಇತ್ಯರ್ಥಪಡಿಲಾಗಿದೆ? (ಜಿಲ್ಲಾವಾರು ವಿವರ ನೀಡುವುದು) | ಆನ್‌ಲೈನ್ ತಂತ್ರಾಂಶದಲ್ಲಿ ಜಿಲ್ಲಾಧಿಕಾರಿಗಳು, ಪ್ರಕರಣಗಳನ್ನು ವಿಲೇ ಮಾಡುವ ಮುನ್ನಾ ಸಹಾಯಕ ಆಯುಕ್ತರು, ತಹಶೀಲ್ದಾರ್, ಕಂದಾಯ ನಿರೀಕ್ಷಕರು, ಯೋಜನಾ ಪ್ರಾಧಿಕಾರಗಳ ವರದಿಗಳನ್ನು ಪಡೆದು ಕ್ರಮವಹಿಸಬೇಕಾಗುತ್ತದೆ. ಈ ವರದಿಗಳು ನಿಗದಿತ ಅವಧಿ ಮೀರಿ ಸ್ವೀಕೃತಗೊಳ್ಳುತ್ತಿರುವುದರಿಂದ ಪ್ರಕರಣಗಳನ್ನು ಸಕಾಲದಲ್ಲಿ ವಿಲೇಗೊಳಿಸಲು ಸಾಧ್ಯವಾಗುತ್ತಿಲ್ಲ.<br><br>ಕೃಷಿ ಭೂಮಿಯನ್ನು ಕೃಷಿಯೇತರ ಉದ್ದೇಶಕ್ಕಾಗಿ ಪರಿವರ್ತಿಸುವ ವಿಧಾನವನ್ನು ಸರಳೀಕರಣ ಗೊಳಿಸಲು ಹಾಗೂ ಭೂ ಪರಿವರ್ತನಾ ಪ್ರಕ್ರಿಯೆಯ ಕಾಲಮಿತಿಯನ್ನು ಕಡಿಮೆಗೊಳಿಸುವ ಪ್ರಸ್ತಾವನೆ ಪರಿಶೀಲನೆಯಲ್ಲಿದೆ. |

ಸಂಖ್ಯೆ: ಆರ್‌ಡಿ 263 ಎಲ್‌ಜಿಕ್ಯೂ 2022

(ಆರ್.ಅಶೋಕ)
ಕಂದಾಯ ಸಚಿವರು